ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ: ಸ.ಶಿ.ಅ/ಇ-ಆಡಳಿತ/ಡೈಸ್-4/2011-11 ದಿನಾಂಕ: 21-05-2011

## <u>ಕೊಟೇಶನ್ ಅಹ್ವಾನ</u>

ಸರ್ವ ಶಿಕ್ಷಣ ಅಭಿಯನದಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಒಂದು ವಿಶ್ಲೇಷಣಾ ವರದಿ 2010-11 ಮುದ್ರಿಸಿ ಈ ಕಛೇರಿಯಿಂದ ನೀಡುವ ವಿವರದಂತೆ ಜಿಲ್ಲಾ ಹಂತಕ್ಕೆ ವಿತರಿಸುವ ಸಲುವಾಗಿ ಪ್ರತಿ ಪುಸ್ತಕ್ಕೆ ತಗಲುವ ವೆಚ್ಚದ ಬಗ್ಗೆ ದರಪಟ್ಟಿಯನ್ನು ಕರೆಯಲಾಗಿದೆ. ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ: 30-05-2011** ರೊಳಗೆ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ತಲುಪುವಂತೆ ಸಲ್ಲಿಸುವುದು ಹಾಗೂ ಲಕೋಟೆಯ ಮೇಲೆ **"ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಒಂದು ವಿಶ್ಲೇಷಣಾ ವರದಿ 2010-11 ಮುದ್ರಣಕ್ಕಾಗಿ ದರಪಟ್ಟಿ"** ಎಂದು ನಮೂದಿಸುವುದು. ಇದರ ತಾಂತ್ರಿಕ ವಿಶಿಷ್ಠತೆಯ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಿವರಣೆ | ಅಳತೆ |
|---|---|---|
| 1 | ಮುದ್ರಿಸಬೇಕಾದ ಅಂದಾಜು ಪ್ರತಿಗಳು | ಆಂಗ್ಲ ಭಾಷೆ- 1500<br>ಕನ್ನಡ ಭಾಷೆ- 3500 |
| 2 | ಕಾಗದದ ಅಳತೆ | 120 ಜಿ.ಎಸ್.ಎಮ್ ಆರ್ಟ್ ಪೇಪರ್ |
| 3 | ಹೊರಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 300 ಜಿ.ಎಸ್.ಎಮ್ ಆರ್ಟ್ ಬೋರ್ಡ್ ಬಹುವರ್ಣ |
| 4 | ಹೊರಪುಟಗಳ ಸಂಖ್ಯೆ<br><br>ಒಳಪುಟಗಳ ಸಂಖ್ಯೆ | 1 ಮತ್ತು 4ನೇ ರಕ್ಷಾ ಪುಟಗಳನ್ನು ಬಹುವರ್ಣಗಳಲ್ಲಿ ಮುದ್ರಿಸಬೇಕು.<br>92+4 |
| 5 | ಒಳ ಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ ಮತ್ತು ಮುದ್ರಣ( ಕಪ್ಪು ಬಿಳುಪಿನಲ್ಲಿ) | 120 ಜಿ.ಎಸ್.ಎಮ್ ಆರ್ಟ್ ಪೇಪರ್ 18 ಪುಟಗಳ ಬಹುವರ್ಣಗಳಲ್ಲಿ ಹಾಗೂ 72 ಪುಟಗಳನ್ನು ಮುದ್ರಿಸಬೇಕು. |
| 6 | ಒಳ ಪುಟಗಳ ಸಂಖ್ಯೆ | 90 |
| 7 | ಬೈಡಿಂಗ್ | ಬುಕ್ ಬೈಂಡಿಂಗ್ (Perfect Binding) |

**ಸೂಚನೆ ಮತ್ತು ನಿಬಂಧನೆಗಳು:**

1. ಮುದ್ರಣಕ್ಕೆ ಸಾಹಿತ್ಯವನ್ನು ಆಯ್ಕೆಯಾದ ಸಂಸ್ಥೆಗೆ ಸಿ.ಡಿ ರೂಪದಲ್ಲಿ ನೀಡಲಾಗುವುದು, ಮುಖ ಪುಟದ ವಿನ್ಯಾಸ ತಯಾರಿಸಿ ರಾಜ್ಯ ಯೋಜನಾ ನಿರ್ದೇಶಕರ ಅನುಮೋದನೆ ಪಡೆಯುವುದು.
2. ಮುದ್ರಣಕ್ಕೆ ಹೋಗುವ ಮುನ್ನ ಮೊದಲ ಪ್ರತಿಯ ಅನುಮೋದನೆಯನ್ನು ಸರ್ವಶಿಕ್ಷಣ ಅಭಿಯಾನ ಕಛೇರಿಯಿಂದ ಪಡೆದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸುವುದು.
3. ನಮೂದಿಸಿದ ದರವು ಮುದ್ರಣ, ಜಿಲ್ಲಾ ಹಂತಕ್ಕೆ ವಿತರಣೆ ಹಾಗೂ ಎಲ್ಲಾ ವಿವಿಧ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, ಮುದ್ರಣ ಕಾರ್ಯಕ್ಕೆ ಯಾವುದೇ ಮುಂಗಡ ಪಾವತಿಸಲಾಗುವುದಿಲ್ಲ.
4. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್‌ಗಳನ್ನು ದೃಢೀಕರಿಸಿ, ಕೊಟೇಶನ್‌ನೊಂದಿಗೆ, ಕಡ್ಡಾಯವಾಗಿ ಸಲ್ಲಿಸುವುದು.
5. ರೂ. 10,000/-( ಹತ್ತು ಸಾವಿರ ರೂ,ಗಳು) ಗಳ EMD ಯನ್ನು ರಾಜ್ಯಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು-01 ಇವರ ಹೆಸರಿನಲ್ಲಿ Demand Draft ರೂಪದಲ್ಲಿ ನೀಡಬೇಕು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಗದುಗೊಳಿಸುವಂತಿರಬೇಕು.
6. ಕಾರ್ಯಾದೇಶದಲ್ಲಿ ನಿಖರವಾದ ಪ್ರತಿಗಳ ಸಂಖ್ಯೆ ಮತ್ತು ನಿಖರವಾದ ಪುಟಗಳ ಆಧಾರದ(Pro-rata) ಮೇಲೆ ಬಿಲ್ಲನ್ನು ಪಾವತಿಸಲಾಗುವುದು.
7. ಕಳಪೆ ಮಟ್ಟದ ಮುದ್ರಣ ಕಾರ್ಯಕ್ಕೆ, ಮುದ್ರಣದೋಷ ಕಂಡುಬಂದಲ್ಲಿ ಅಥವಾ ನಿಗಧಿತ ಸ್ಪೆಸಿಫಿಕೇಷನ್ ಗಿಂತ ಕಡಿಮೆ ಗುಣಮಟ್ಟದ ಪೇಪರ್ ಮುದ್ರಣ ಕಾರ್ಯಕ್ಕೆ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಇಂತಹ ಪುಸ್ತಕಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗ್ಗೆ ಯಾವುದೆ ಅನುದಾನ ಬಿಡುಗಡೆ ಮಾಡುವುದಿಲ್ಲ. ಇದರಿಂದ ಆಗಬಹುದಾದ ನಷ್ಟಗಳಿಗೆ ತಮ್ಮ ಸಂಸ್ಥೆಯೇ ಜವಬ್ದಾರಿಯಾಗಿರುತ್ತದೆ.
8. ಕಾರ್ಯದೇಶ ನೀಡಿದ 10 ದಿನಗಳ ಒಳಗಾಗಿ ಮುದ್ರಣ ಮತ್ತು ವಿತರಣೆಯನ್ನು ಪೂರ್ಣಗೊಳಿಸತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.10% ರಂತೆ ದಂಡ ವಿಧಿಸಲಾಗುವುದು. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು, EMD ಮುಟ್ಟುಗೋಲು ಹಾಕಿಗೊಳ್ಳಲಾಗುವುದು.
9. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ ಮತ್ತು ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿರುತ್ತದೆ.
10. ಮುದ್ರಣ ಕಾರ್ಯದ ನಂತರ ಬಿಲ್ ಜೊತೆಯಲ್ಲಿ ಸಿ.ಡಿ ರೂಪದಲ್ಲಿ ಅಂತಿಮ ಮುದ್ರಣ ಸಾಹಿತ್ಯದ ವಿವರಗಳನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು, ರಾಜ್ಯ ಕಛೇರಿಗೆ ನೀಡುವ ವಿತರಣೆ ವಿತರಿಸಿದ ನಂತರ ಪಡೆದ ಸ್ವೀಕೃತ ಸಮೇತ ಬಿಲ್ ಸಲ್ಲಿಸಿವುದು.
11. ಹೆಚ್ಚಿನ ಮಾಹಿತಿಗಾಗಿ ***www.ssakarnataka.gov.in*** ವೆಬ್‌ಸೈಟ್‌ನ್ನು ವೀಕ್ಷಿಸುವುದು.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವಶಿಕ್ಷಣ ಅಭಿಯಾನ

ಸರ್ವ ಶಿಕ್ಷಣ ಅಭಿಯಾನ

ಕರ್ನಾಟಕ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001


ಸಂಖ್ಯೆ: ಸ.ಶಿ.ಅ/ಇ-ಆಡಳಿತ/ಡೈಸ್-3/2011-12 ದಿನಾಂಕ: 21-05-2011

**<u>ಕೊಟೇಶನ್ ಅಹ್ವಾನ</u>**

ಸರ್ವಶಿಕ್ಷಣ ಅಭಿಯಾನದ 2010-11 ನೇ ಸಾಲಿನ ಡೈಸ್ ಶೈಕ್ಷಣಿಕ ಮಾಹಿತಿ ಜಿಲ್ಲಾವಾರು ವರದಿ ಪುಸ್ತಕಗಳನ್ನು ಮುದ್ರಿಸುವ ಸಲುವಾಗಿ ಪ್ರತಿ ಪುಸ್ತಕಕ್ಕೆ ತಗಲುವ ವೆಚ್ಚದ ಬಗ್ಗೆ ದರಪಟ್ಟಿಯನ್ನು ಕರೆಯಲಾಗಿದೆ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ:** 30-05-2011 ರೊಳಗೆ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸಪೂರಕ ಕಟ್ಟಡ. ನೃಪತುಂಗ ರಸ್ತೆ, ಬೆಂಗಳೂರು-10 ಇವರಿಗೆ ತಲುಪುವಂತೆ ಸಲ್ಲಿಸುವುದು ಹಾಗೂ ಲಕೋಟೆಯ ಮೇಲೆ **<u>"ಡೈಸ್ ಶೈಕ್ಷಣಿಕ ಜಿಲ್ಲಾವಾರು ವರದಿ ಮುದ್ರಣಕ್ಕಾಗಿ ದರಪಟ್ಟಿ"</u>** ಎಂದು ನಮೂದಿಸುವುದು. ಇದರ ತಾಂತ್ರಿಕ ವಿಶಿಷ್ಠತೆಯ ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | ಮುದ್ರಿಸಬೇಕಾದ ಅಂದಾಜು ಪ್ರತಿಗಳು | ಆಂಗ್ಲ ಭಾಷೆ 800 |
| 2 | ಕಾಗದದ ಅಳತೆ | 70 ಜಿ.ಎಸ್.ಎಂ ಮ್ಯಾಪ್ ಲೀಥೋ A4 ಪೇಪರ್ |
| 3. | ಹೊರಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 300 ಜಿ.ಎಸ್.ಎಂ ಆರ್ಟ್ ಬೋರ್ಡ್ ಬಹುವರ್ಣ |
| 4 | ಹೊರಪುಟಗಳ ಸಂಖ್ಯೆ | 04.1 ಮತ್ತು 4 ನೇ ರಕ್ಷಾ ಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು. |
| 5 | ಒಳ ಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ ಮತ್ತು ಮುದ್ರಣ | 'ಎ' ಗ್ರೇಡ್ ಮ್ಯಾಪ್ ಲಿತ್ 70 ಜಿಎಸ್ಎಂ ಮತ್ತು ಏಕವರ್ಣದಲ್ಲಿ ಮುದ್ರಿಸಬೇಕು |
| 6 | ಒಳ ಪುಟಗಳ ಸರಾಸರಿ ಸಂಖ್ಯೆ(ಅಂದಾಜು) | 280 |
| 7 | ಬೈಂಡಿಂಗ್ | ಬುಕ್ ಬೈಂಡಿಂಗ್ (Perfect Binding) |

**ಸೂಚನೆ ಮತ್ತು ನಿಬಂಧನೆಗಳು:**

1. ಮುದ್ರಣಕ್ಕೆ ಸಾಹಿತ್ಯವನ್ನು ಆಯ್ಕೆಯಾದ ಸಂಸ್ಥೆಗೆ ಸಿ.ಡಿ ರೂಪದಲ್ಲಿ ನೀಡಲಾಗುವುದು, ಮುಖ ಪುಟದ ವಿನ್ಯಾಸ ತಯಾರಿಸಿ ರಾಜ್ಯ ಯೋಜನಾ ನಿರ್ದೇಶಕರ ಅನುಮೋದನೆ ಪಡೆಯುವುದು.
2. ತಮ್ಮ ಕೊಟೇಶನ್ ದರಪಟ್ಟಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳ ವಿತರಣಾ ವೆಚ್ಚ , ಸಾಗಾಣಿಕ ವೆಚ್ಚ ಹಾಗೂ ಎಲ್ಲಾ ರೀತಿಯ ತೆರಿಗೆಗಳನ್ನು ಒಳಗೊಂಡಿರಬೇಕು.
3. ಮುದ್ರಣಕ್ಕೆ ಹೋಗುವ ಮುನ್ನ ಮೊದಲ ಪ್ರತಿಯ ಅನುಮೋದನೆಯನ್ನು ಸರ್ವಶಿಕ್ಷಣ ಅಭಿಯಾನ ಕಛೇರಿಯಿಂದ ಪಡೆದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸುವುದು.

4. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್(ಒಳಪುಟ ಮತ್ತು ರಕ್ಷಾ ಪುಟ)ಗಳನ್ನು ದೃಢೀಕರಿಸಿ, ಕೊಟೇಶನ್‌ನೊಂದಿಗೆ, ಕಡ್ಡಾಯವಾಗಿ ಸಲ್ಲಿಸುವುದು.

5. ರೂ. 10,000/-( ಹತ್ತು ಸಾವಿರ ರೂ.ಗಳು) ಗಳ EMD ಯನ್ನು ರಾಜ್ಯಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು-01 ಇವರ ಹೆಸರಿನಲ್ಲಿ Demand Draft ರೂಪದಲ್ಲಿ ನೀಡಬೇಕು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಗದುಗೊಳಿಸುವಂತಿರಬೇಕು.

6. ಕಾರ್ಯಾದೇಶದಲ್ಲಿ ನಿಖರವಾದ ಪ್ರತಿಗಳ ಸಂಖ್ಯೆ ಮತ್ತು ನಿಖರವಾದ ಪುಟಗಳ ಆಧಾರದ(Pro-rata) ಮೇಲೆ ಬಿಲ್ಲನ್ನು ಪಾವತಿಸಲಾಗುವುದು.

7. ಕಳಪೆ ಮಟ್ಟದ ಮುದ್ರಣ ಕಾರ್ಯಕ್ಕೆ, ಮುದ್ರಣದೋಷ ಕಂಡುಬಂದಲ್ಲಿ ಅಥವಾ ನಿಗಧಿತ ಸ್ಪೆಸಿಫಿಕೇಷನ್ ಗಿಂತ ಕಡಿಮೆ ಗುಣಮಟ್ಟದ ಪೇಪರ್ ಮುದ್ರಣ ಕಾರ್ಯಕ್ಕೆ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಇಂತಹ ಪುಸ್ತಕಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡುವುದಿಲ್ಲ. ಇದರಿಂದ ಆಗಬಹುದಾದ ನಷ್ಟಗಳಿಗೆ ತಮ್ಮ ಸಂಸ್ಥೆಯೇ ಜವಬ್ದಾರಿಯಾಗಿರುತ್ತದೆ.

8. ಕಾರ್ಯದೇಶ ನೀಡಿದ 7 ದಿನಗಳ ಒಳಗಾಗಿ ಮುದ್ರಣ ಮತ್ತು ವಿತರಣೆಯನ್ನು ಪೂರ್ಣಗೊಳಿಸತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.10% ರಂತೆ ದಂಡ ವಿಧಿಸಲಾಗುವುದು. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು, EMD& SD ಮುಟ್ಟುಗೋಲು ಹಾಕಿಗೊಳ್ಳಲಾಗುವುದು.

9. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ ಮತ್ತು ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿರುತ್ತದೆ.

10. ಹೆಚ್ಚಿನ ಮಾಹಿತಿಗಾಗಿ ***www.ssakarnataka.gov.in*** ವೆಬ್‌ಸೈಟ್‌ನ್ನು ವೀಕ್ಷಿಸುವುದು.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವಶಿಕ್ಷಣ ಅಭಿಯಾನ